
ವಿನಂತಿಸಿಕೊಂಡರು. ಈ ಸಂದರ್ಭದಲ್ಲಿ ಅವರು ಆಡಿದ ಮಾತು ಹಾಗೂ ಮಂಡಿಸಿದ ಹೇಳಿಕೆ ಜಗತ್ತಿನ 'ನ್ಯಾಯ ಸಾಹಿತ್ಯ'ದ ಚಾರಿತ್ರಿಕ ದಾಖಲೆಗಳಾಗಿ 'ಲಾ ಆ್ಯಸ್ ಲಿಟರೇಚರ್' ಎಂಬ ಮಹತ್ವದ ಪುಸ್ತಕದಲ್ಲಿ ಸೇರ್ಪಡೆಗೊಂಡಿವೆ. ತಮ್ಮ ಹೇಳಿಕೆಯ ಕೊನೆಗೆ, 'ಈ ಸರ್ಕಾರದ ಬಗೆಗೆ ರಾಜದ್ವೇಷ ವ್ಯಕ್ತಪಡಿಸಲಾಗಿವೆ ಎಂಬುದಕ್ಕೆ ಸಾಕ್ಷಿಯಾಗಿ ಕೋರ್ಟಿನಲ್ಲಿ ಮಂಡಿಸಿರುವ ಈ ಬರಹಗಳನ್ನು ಬರೆಯಲು ನಾನು ಶಕ್ತನಾಗಿದ್ದೆ ಎಂಬುದು ನನ್ನ ಅಮೂಲ್ಯ ಭಾಗ್ಯವಾಗಿದೆ' ಎಂದು ಗಾಂಧೀಜಿ ಸ್ಪಷ್ಟವಾಗಿ ಹೇಳಿದರು. 'ದುಷ್ಟ ಶಕ್ತಿಗಳಿಗೆ ಅಸಹಕಾರ ತೋರಿದ್ದಕ್ಕಾಗಿ ನೀಡುವ ಶಿಕ್ಷೆಗೆ ಸ್ವಇಚ್ಛೆಯಿಂದ ಒಡ್ಡಿಕೊಳ್ಳುವುದು ಎಂಬ ಅರ್ಥವೂ 'ಅಹಿಂಸೆ' ಎಂಬ ಪದಕ್ಕಿದೆ' ಎಂದ ಗಾಂಧೀಜಿ, ತಮ್ಮ ಈ ಚಾರಿತ್ರಿಕ ಹೇಳಿಕೆಯ ಕೊನೆಗೆ ಹೇಳಿದ ಮಾತುಗಳಿವು:

'ನ್ಯಾಯಾಧೀಶರೇ, ಈಗ ನಿಮ್ಮೆದುರಿಗೆ ಇರುವ ಆಯ್ಕೆಗಳು ಎರಡೇ: ಒಂದು, ನೀವು ಪ್ರತಿನಿಧಿಸುತ್ತಿರುವ ಕಾನೂನು ಒಂದು ದುಷ್ಟ ಕಾನೂನು; ಹಾಗೂ ನಾನು (ಗಾಂಧಿ) ನಿಜಕ್ಕೂ ಮುಗ್ಧ ಎಂದು ನಿಮಗೆ ಅನ್ನಿಸಿದರೆ, ಈ ದುಷ್ಟ ವ್ಯವಸ್ಥೆಯ ಜೊತೆಗಿನ ಸಂಬಂಧ ಕಡಿದುಕೊಂಡು ನಿಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದು. ಎರಡು, ನೀವು ಪ್ರತಿನಿಧಿಸುತ್ತಿರುವ ಕಾನೂನು ಜನರ ಒಳಿತಿಗಾಗಿಯೇ ಇದೆ, ಹಾಗೂ ನನ್ನ ಚಟುವಟಿಕೆಗಳು ಜನಕಲ್ಯಾಣಕ್ಕೆ ಅಪಾಯಕಾರಿಯಾಗಿವೆ ಎಂದು ನಿಮಗೆ ಅನ್ನಿಸಿದರೆ ಅತ್ಯಂತ ಉಗ್ರ ಶಿಕ್ಷೆ ವಿಧಿಸುವುದು.'

ಗಾಂಧೀಜಿಗೆ ಆರು ವರ್ಷ ಜೈಲು ಶಿಕ್ಷೆಯಾಯಿತು.

## 3

1930ರ ಹೊತ್ತಿಗೆ 'ಯಂಗ್ ಇಂಡಿಯಾ', 'ನವಜೀವನ್' ಪತ್ರಿಕೆಗಳೂ ನಿಷೇಧಕ್ಕೊಳಗಾದವು. ಬರಹ, ಕರಪತ್ರ, ಮಾತುಗಳ ಮೂಲಕ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗುತ್ತಾ, ಅಸ್ಪೃಶ್ಯತೆಯ ವಿರುದ್ಧ ಹೋರಾಟವನ್ನೂ ಗಾಂಧೀಜಿ ಮುಂದುವರಿಸುತ್ತಿದ್ದರು. ಈ ನಡುವೆ 'ನವಜೀವನ್' ಪತ್ರಿಕೆಯ ದಲಿತ ಓದುಗರೊಬ್ಬರು, 'ಅಂತ್ಯಜ', 'ಅಸ್ಪೃಶ್ಯ' ಮುಂತಾದ ಪದಗಳಿಂದ ನಮಗೆ ನೋವಾಗುತ್ತದೆ; ಅದರ ಬದಲಿಗೆ, ಹದಿನೈದನೇ



ಶತಮಾನದ ಗುಜರಾತಿ ಸಂತ ಕವಿ ನರಸಿಂಹ ಮೆಹತಾ ನೊಂದ ಸಮುದಾಯಗಳನ್ನು ಗುರುತಿಸಲು ಬಳಸಿದ್ದ 'ಹರಿಜನ' ಎಂಬ ಪದವನ್ನು ಬಳಸಬಹುದೆಂದು ಸಲಹೆ ಕೊಟ್ಟಿದ್ದರು. ನರಸಿಂಹ ಮೆಹತಾರ 'ವೈಷ್ಣವ ಜನ ತೋ' ಕವಿತೆ ಗಾಂಧೀಜಿಯ ಪ್ರಿಯ ಪ್ರಾರ್ಥನೆಗಳಲ್ಲೊಂದಾಗಿತ್ತು. ಕವಿ ಬಳಸಿದ 'ಹರಿಜನ' ಪದ ಗಾಂಧೀಜಿಯ ಎದೆ ಮುಟ್ಟಿತು. 'ಹರಿಜನ' ಎಂಬ ಪದಬಳಕೆಯಿಂದಾಗಿ ಹಿಂದೂಗಳಲ್ಲಿ ದೈವೀಭಾವ ಜಾಗೃತವಾಗಬಹುದು; ಅಸ್ಪೃಶ್ಯರ ಮೇಲೆ ಅವರು ಎಸಗುತ್ತಿದ್ದ ಕ್ರೌರ್ಯ ಕಡಿಮೆಯಾಗಬಹುದು ಅನ್ನಿಸಿತು. 1933ರಲ್ಲಿ ಗಾಂಧೀಜಿ ಮತ್ತೆ ಜೈಲು ಸೇರಿದಾಗ, ಬಂದೀಖಾನೆಯಿಂದಲೇ 'ಹರಿಜನ್' ಇಂಗ್ಲಿಷ್ ಪತ್ರಿಕೆಯನ್ನು ಸಂಪಾದಿಸಲು ಅನುಮತಿ ಸಿಕ್ಕಿತು. ಜೊತೆಗೆ ಗುಜರಾತಿಯಲ್ಲಿ 'ಹರಿಜನ ಬಂಧು' ಹಿಂದಿಯಲ್ಲಿ 'ಹರಿಜನ್ ಸೇವಕ್' ಪತ್ರಿಕೆಗಳೂ ಪ್ರಕಟವಾಗತೊಡಗಿದವು. ನಿಧಾನವಾಗಿ ಈ ಪತ್ರಿಕೆಗಳು ಓದುಗರ ಮನಸ್ಸಿನಲ್ಲಿ ಅಸ್ಪೃಶ್ಯತೆಯ ಬಗ್ಗೆ ಪ್ರಶ್ನೆಗಳನ್ನು